PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 137-141
©*IIMRD*, Mysuru
www.iimrd.com

# ಬೆಣ್ಣಿಹಳ್ಳ ಪುನರ್ವಸತಿ ಕೇಂದ್ರಗಳ ಸ್ಥಿತಿಗತಿಗಳು: ಒಂದು ಅಧ್ಯಯನ

ಶ್ರೀ ಎಸ್ ಎಸ್ ಮಾಯಣ್ಣವರ[1] ಮತ್ತು ಡಾ. ಕೆ.ವಿ. ಪ್ರಜ್ಞಾ[2]

**ಪೀಠಿಕೆ**

ವಿಶ್ವದ ವಿವಿಧೆಡೆ ಪ್ರಾಕೃತಿಕ ವಿಕೋಪಗಳಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಪ್ರವಾಹ, ಭೂಕಂಪ, ಸುನಾಮಿ, ಜ್ವಾಲಾಮುಖಿಯಂತಹ ಸಮಸ್ಯೆಗಳಲ್ಲಿ ನೆರೆಹಾವಳಿಯು ಕೂಡ ಒಂದು. ನೆರೆ ಹಾವಳಿಯಿಂದ ಸಂತ್ರಸ್ಥರಾದ ಜನರ ನೋವು, ಸಂಕಟ, ತೊಳಲಾಟ ನೋಡಲಾಗದು. ಮನೆ ಮಠವನ್ನು ಕಳೆದುಕೊಂಡು ಜನ ಬೀದಿಗೆ ಬಂದುಬಿಡುತ್ತಾರೆ. ಅ ನಿಟ್ಟಿನಲ್ಲಿ ಬೀದಿಗೆ ಬಿದ್ದವರನ್ನು ಗುರುತಿಸಿ ಅವರಿಗೆ ಸೂರನ್ನು ಕಲ್ಪಿಸಿಕೊಟ್ಟು ಅವರು ಸ್ವಾಭಿಮಾನಿಗಳಾಗಿ ಬದುಕುವಂತಹ ಅವಕಾಶ ಕಲ್ಪಿಸುವುದು ಅವಶ್ಯಕವಾಗಿದೆ. ಈ ನಿಟ್ಟಿನಲ್ಲಿ ಪ್ರಸ್ತುತ ಲೇಖನದಲ್ಲಿ ಮಲಪ್ರಭಾ ಉಪನದಿಯಾದ ಬೆಣ್ಣಿಹಳ್ಳದ ಪುನರ್ವಸತಿ ಕೇಂದ್ರಗಳ ಕುರಿತಾಗಿ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಉತ್ತರ ಕರ್ನಾಟಕದ ಪ್ರವಾಹವನ್ನುಂಟು ಮಾಡುವ ನದಿಗಳಲ್ಲಿ ಬೆಣ್ಣಿಹಳ್ಳ ಕೂಡ ಒಂದು. ಧಾರವಾಡ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಇದು 138 ಕಿಲೋ ಮೀಟರ್‌ನಷ್ಟು ಉದ್ದ ಹರಿಯುತ್ತದೆ. ನರಗುಂದ, ನವಲಗುಂದ, ರೋಣ, ಬಾದಾಮಿ ತಾಲೂಕಿನ ಹಳ್ಳಿಗಳಲ್ಲಿನ ನೆರೆ ಸಂತ್ರಸ್ಥರಿಗೆ ಕಲ್ಪಿಸಿಕೊಟ್ಟಿರುವ ಪುನರ್ವಸತಿ ಸ್ಥಿತಿಗತಿಯ ಬಗ್ಗೆ ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ. ಆಣೆಕಟ್ಟು ನಿರ್ಮಾಣ, ಕೈಗಾರೀಕರಣ, ಪ್ರವಾವ ಮುಂತಾದ ಕಾರಣಗಳಿಂದ ಜನರನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸ್ಥಳಾಂತಿರಿಸಿ ಅವರಿಗೆ ಪುನರ್ವಸತಿ ಕಲ್ಪಿಸಿರುವುದನ್ನು ಕಾಣಬಹುದಾಗಿದೆ.

ಈ ನಿಟ್ಟಿನಲ್ಲಿ 1982 ಡಿಸೆಂಬರ್ 20ರಂದು ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯು 1987ನೇ ವರ್ಷವನ್ನು ಅಂತರ್‌ರಾಷ್ಟ್ರೀಯ ವಸತಿ ವರ್ಷವನ್ನಾಗಿ ಆಚರಿಸಲು ನಿರ್ಧರಿಸಲಾಯಿತು. ರಾಜ್ಯದಲ್ಲಿ ಅನೇಕ ನದಿ, ಉಪನದಿ ಮುಂತಾದುವುಗಳಿಂದ ವಸತಿಯನ್ನು ಕಳೆದುಕೊಂಡವರು ಪುನರ್ವಸತಿ ಕೇಂದ್ರಗಳತ್ತ ಬರುತ್ತಿದ್ದಾರೆ. ಆದರೆ ಅವರಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡುವಲ್ಲಿ ಸರಕಾರಗಳು ಪ್ರಮಾಣಿಕ ಪ್ರಯತ್ನವು ಅಷ್ಟಕ್ಕಷ್ಟೇ. ಹೀಗಾಗಿ ಪುನರ್ವಸತಿ ಹಾಗೂ ಪುನಸಜ್ಜೀಕರಣ

[1] *ಸಂಶೋಧನಾ ವಿದ್ಯಾರ್ಥಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.*
[2] *ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುರಗೋಡ.*

ರಾಷ್ಟ್ರೀಯ ನೀತಿ 2003 ಮತ್ತು ರಾಷ್ಟ್ರೀಯ ಪುನರ್ವಸತಿ ನೀತಿ ಇವುಗಳಲ್ಲಿ ಬದಲಾವಣೆಯನ್ನು ತರಲು NCPCR ಸಲಹೆ ಮಾಡಿದೆ.

ಉತ್ತರ ಕರ್ನಾಟಕದಲ್ಲಿ ಬೆಣ್ಣಿಹಳ್ಳ 5048 ಚದರ ಕಿ.ಮೀ. ವಿಸ್ತಾರ ಹೊಂದಿದ್ದು, ಇದು ಮಹಾದಾಯಿ ಜಲಾನಯನ ಪ್ರದೇಶಕ್ಕಿಂತಲೂ ಅಧಿಕವಾಗಿದೆ. ಬೆಣ್ಣಿಹಳ್ಳದ 1.5 ಟಿ.ಎಂ.ಸಿ ನೀರನ್ನು ಮಾತ್ರ ಹಳ್ಳದ ದಂಡೆಯ ಗ್ರಾಮಗಳ ಜನರು ಬಳಕೆ ಮಾಡಿಕೊಳ್ಳುತ್ತಿದ್ದಾರೆ. 1978, 1982, 1992, 2002, 2007 ಮತ್ತು 2009ರಲ್ಲಿ ಬೆಣ್ಣಿಹಳ್ಳದ ಪ್ರವಾಹದಿಂದಾಗಿ 52 ಗ್ರಾಮಗಳು ಜಲಾವೃತ್ತಗೊಂಡಿವೆ. ಪ್ರವಾಹಕ್ಕೆ ತುತ್ತಾದ ಹಳ್ಳಿಗಳಿಗೆ ಪುನರ್ವಸತಿಯನ್ನು ಕಲ್ಪಿಸಿಕೊಡಲಾಗಿದೆ. ಅಲ್ಲಿಯ ಪುನರ್ವಸತಿ ಕೇಂದ್ರಗಳು ಯಾವ ಸ್ಥಿತಿಯನ್ನು ತಲುಪಿವೆ ಅನ್ನುವುದನ್ನು, ನಿಜವಾದ ಫಲಾನುಭವಿಗಳಿಗೆ ತಲುಪಿವೆಯೇ ಅನ್ನುವುದನ್ನು, ತಲುಪಿದ್ದರೆ ಅವರ ಜೀವನಶೈಲಿಯಲ್ಲಾದ ಬದಲಾವಣೆಗಳೇನು ಅನ್ನುವುದನ್ನು ತಿಳಿದುಕೊಳ್ಳುವುದು ಅಧ್ಯಯನದಲ್ಲಿ ತಿಳಿದಿಕೊಳ್ಳಲು ಪ್ರಯತ್ನಿಸಲಾಗಿದೆ.

**ಅಧ್ಯಯನ ಪ್ರಾಕಲ್ಪನೆ**

- ಬೆಣ್ಣಿಹಳ್ಳದ ಸಂತ್ರಸ್ಥರ ಜೀವನವು ಹಳೆಯ ಗ್ರಾಮವನ್ನು ಬಿಡಲಿಕ್ಕಾಗದೇ ಹೊಸ ಗ್ರಾಮದಲ್ಲಿ ಇರಲಿಕ್ಕಾಗದೇ ಅತಂತ್ರ ಸ್ಥಿತಿಯನ್ನು ತಲುಪಿದ್ದಾರೆ.
- ಬೆಣ್ಣಿಹಳ್ಳದ ಪುನರ್ವಸತಿ ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತಿದೆ ಮತ್ತು ಬೆಣ್ಣಿಹಳ್ಳ ಪುನರ್ವಸತಿ ಕೇಂದ್ರಗಳ ಮನೆಗಳ ವಿತರಣೆಯಲ್ಲಿ ಅಕ್ರಮ ನಡೆದಿದೆ.
- ಬೆಣ್ಣಿಹಳ್ಳದ ಪುನರ್ವಸತಿ ಕೇಂದ್ರಗಳ ಬಗ್ಗೆ ಇಲ್ಲಿಯವರೆಗೂ ಯಾರೂ ಯಾವ ಕಾಳಜಿಯನ್ನೂ ವಹಿಸದಿರುವುದು ಕಂಡುಬಂದಿದೆ.
- ನವಗ್ರಾಮದ ಜನರು ಆಧುನಿಕತೆಯ ಬದುಕಿಗೆ ಹೊಂದಿಕೊಳ್ಳುವಲ್ಲಿ ವಿಫಲರಾಗಿದ್ದಾರೆ.
- ನವಗ್ರಾಮದ ಜನರು ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳಲ್ಲಿ ಸಹಭಾಗಿತ್ವವನ್ನು ಕಳೆದುಕೊಂಡಿದ್ದಾರೆ.

**ಅಧ್ಯಯನದ ಉದ್ದೇಶಗಳು**

- ಬೆಣ್ಣಿಹಳ್ಳದ ಪುನರ್ವಸತಿ ಕೇಂದ್ರಗಳ ಹಿನ್ನಲೆಯನ್ನು ಅಧ್ಯಯನ ಮಾಡುವುದು.
- ಬೆಣ್ಣಿಹಳ್ಳ ಪಾತ್ರದಿಂದ ಸ್ಥಳಾಂತರಗೊಂಡ ಸಂತ್ರಸ್ಥರ ಸಾಮಾಜಿಕ–ಆರ್ಥಿಕ ಸ್ಥಿತಿಗತಿಗಳನ್ನು ತಿಳಿಯುವುದು.
- ಬೆಣ್ಣಿಹಳ್ಳದ ಪುನರ್ವಸತಿ ಕೇಂದ್ರಗಳಲ್ಲಿನ ಸಮಸ್ಯೆಗಳನ್ನು ಅಧ್ಯಯನ ಮಾಡುವುದು.

**ಸಂಶೋಧನಾ ವಿಧಾನಗಳು**

ಪ್ರಾಥಮಿಕ ಮಾಹಿತಿ ಸಂಗ್ರಹಣೆಗಾಗಿ ಅಧ್ಯಯನ ಕ್ಷೇತ್ರದ ಮೂವತ್ತು ಪುನರ್ವಸತಿ ಕೇಂದ್ರಗಳ ಫಲಾನುಭವಿಗಳ ಸಮೀಕ್ಷೆ ನೆಡೆಸುವುದರ ಮೂಲಕ ಅವಲೋಕನ, ಸಂದರ್ಶನ, ಪ್ರಶ್ನಾವಳಿ, ವಿಧಾನಗಳಿಂದ ಮಾಹಿತಿಯನ್ನು ಪಡೆಯಲಾಗಿದೆ. ಮಾಧ್ಯಮಿಕ ಮಾಹಿತಿಯನ್ನು ಪ್ರಕಟಿತ, ಅಪ್ರಕಟಿತ ಗ್ರಂಥಗಳು, ಲೇಖನಗಳು, ಪತ್ರಿಕಾ ಲೇಖನಗಳು, ಪತ್ರಿಕಾ ವರದಿಗಳು, ಅಂತರ್ಜಾಲ ಮುಂತಾದ ಮೂಲಗಳಿಂದ ಮಾಹಿತಿ ಪಡೆಯಲಾಗಿದೆ.

**ಅದ್ಯಯನದ ಕ್ಷೇತ್ರ ಮತ್ತು ವ್ಯಾಪ್ತಿ**

ಪ್ರಸ್ತುತ ಅಧ್ಯಯನಕ್ಕೆ ಧಾರವಾಡ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಧಾರವಾಡ ಜಿಲ್ಲೆಯ ನವಲಗುಂದ, ಅರವಟ್ಟಿ, ಬ್ಯಾಹಟ್ಟಿ, ಮುಳ್ಳೊಳ್ಳಿ, ರೊಟ್ಟಿಗೆವಾಡ, ಹಿರೇನರ್ತಿ, ಕುಂದಗೋಳ, ಕೊಂಗವಾಡ, ಬಸಾಪುರ, ಅಮರಗೋಳ, ಗುಡಿಸಾಗರ ಗ್ರಾಮಗಳನ್ನೂ, ಗದಗ ಮತು ಬಾಗಲಕೋಟೆ ಜಿಲ್ಲೆಗಳ ನರಗುಂದ ಮತ್ತು ಬದಾಮಿ ತಾಲೂಕಿನ ಕುರ್ಲಗೇರಿ, ಸುರಕೋಡ, ರೋಣ ತಾಲೂಕಿನ ಹುನಗುಂಡಿ, ಬೇನಾಳ, ಕುರಟ್ಟಿ, ಕರಮುಡಗಿ, ಮೇಗೂರು, ಕಿತ್ತಲಿ, ಹಡಗಲಿ, ಮಾಳವಾಡ, ಗೋವನಕೊಪ್ಪ, ಹೆಬ್ಬಳ್ಳಿ, ಕೊಪ್ಪ, ಬೂದಿಹಾಳ, ತಗ್ಗಿನಹಾಳ, ಕಾತರಕಿ, ಗಾಡಗೋಳಿ, ಮೆಣಸಗಿ, ಕಳಸ, ನಿರ್ಲಗಿ, ಕ್ಯಾಡ, ಹೊಳೆ ಮಣ್ಣೂರು, ಅಸುಟಿ, ಹೊಳೆ ಹಡಗಲಿ, ಹೊಳೆ ಆಲೂರು, ಬಿಸ್‌ಬೇಲೇರಿ, ಬಸರಕೋಡ ಸೇರಿದಂತೆ ಒಟ್ಟು 35 ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಾಗಿದೆ.

**ಪುನರ್ವಸತಿ ಗ್ರಾಮಗಳಲ್ಲಿನ ಸಮಸ್ಯೆಗಳು**

1978, 1982, 1992, 2002, 2007 ಮತ್ತು 2009ರಲ್ಲಿ ಉಂಟಾದ ಬೆಣ್ಣೆಹಳ್ಳದ ಪ್ರವಾಹವು ಅಲ್ಲಿನ ಜನರ ಮೇಲೆ ಅನೇಕ ದುಷ್ಪರಿಣಾಮವನ್ನು ಭೀರಿತು. ಪ್ರಮುಖವಾಗಿ ಬಹುತೇಕ ಜನರ ಮನೆಮಠಗಳು ಹಾನಿಗೊಳಗಾದವು. ಅಂತಹವರಿಗೆ ಶಾಶ್ವತವಾದ ಪುನರ್ವಸತಿಯನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಆಶ್ರಯ ಯೋಜನೆ, ಬಸವ ವಸತಿ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ, ಇಂದಿರಾ ಆವಾಸ್ ಯೋಜನೆಗಳಿಂದ ಸರ್ಕಾರ ಮತ್ತು ಶ್ರೀ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಮುಂದೆ ಬಂದು ಸಂತ್ರಸ್ಥರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿತು. ಆಶ್ರಯ ಮನೆಗಳೇನೊ ಲಭ್ಯವಾಗಿವೆ. ಆದರೆ ಅವುಗಳು ಪೂರ್ಣ ಪ್ರಮಾಣದಲ್ಲಿ ಲಭ್ಯವಾಗಿಲ್ಲ ಮತ್ತು ಇವು ಅನೇಕ ಸಮಸ್ಯೆಗಳಿಂದ ಕೂಡಿರುವುದುನ್ನು ಕಾಣಬಹುದು. ಮನೆಗಳ ಕಳಪೆ ನಿರ್ಮಾಣ, ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ಸಮಸ್ಯೆ, ಶೌಚಾಲಯ ಸಮಸ್ಯೆ, ಚರಂಡಿ ಸಮಸ್ಯೆ, ರಸ್ತೆಗಳ ಸಮಸ್ಯೆ, ಶಾಲೆಯ ಸಮಸ್ಯೆ, ಅಂಗನವಾಡಿ ಸಮಸ್ಯೆ, ಆರೋಗ್ಯ ಕೇಂದ್ರಗಳ

ಸಮಸ್ಯೆ, ಜಾನುವಾರುಗಳಿಗೆ ಕೊಟ್ಟಿಗೆ ಸಮಸ್ಯೆ, ಖಾಲಿ ಜಾಗದ ತುಂಬಾ ಜಾಲಿಕಂಟಿ ಬೆಳೆದು ನಿಂತಿರುವ ಸಮಸ್ಯೆ, ಸ್ಥಳದ ಅಭಾವ, ಮನೆಗಳು ಬಿದ್ದಿರುವುದು, ಪಡಸಾಲೆಗಳು ಕುಸಿದಿರುವುದು, ಮನೆ ಸೋರುವಿಕೆ ಮುಂತಾದ ಸಮಸ್ಯೆಗಳನ್ನು ಇಲ್ಲಿನ ಜನರು ಅನುಭವಿಸುತ್ತಿದ್ದಾರೆ. ಆಸರೆ ಮನೆಗಳು ಜನರಿಗೆ ಆಸರೆಯಾಗದೆ ಶಿಥಿಲಗೊಂಡು ಎಲ್ಲೆಡೆ ಜಾಲಿಕಂಟಿ ಬೆಳೆದು ನಿಂತಿದೆ. ಈ ಕಾರಣಗಳಿಂದ ಜನರು ಪುನರ್ವಸತಿ ಗ್ರಾಮಗಳಿಗೆ ಬರಲು ಒಪ್ಪದ ಪರಿಸ್ಥಿತಿ ನಿರ್ಮಾಣವಾಗಿದೆ. 2009ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಬಿ ಎಸ್ ಯಡಿಯೂರಪ್ಪನವರು ಬೆಣ್ಣಿಹಳ್ಳ ಪಾತ್ರದ ಜನರಿಗೆ ಸೂರನ್ನು ಕಲ್ಪಿಸುವ ಉದ್ದೇಶದಿಂದ ಅಡಿಗಲ್ಲನ್ನು ಹಾಕಿದರು. ಆದರೆ ಸರಿಯಾದ ಕಾರ್ಯಗಳು ಆಗದೇ ಹಾಗೆಯೇ ಉಳಿದುಬಿಟ್ಟಿವೆ. ಬೆಣ್ಣಿಹಳ್ಳವು 1987ರಿಂದ ನೆರೆಹಾವಳಿಯನ್ನುಂಟು ಮಾಡಲು ಶುರು ಮಾಡಿದೆ. ಏಕೆಂದರೆ ಬೆಣ್ಣಿಹಳ್ಳದ ದಂಡೆಯ ಜಮೀನು ಹೊಂದಿರುವವರು ಯಂತ್ರೋಪಕರಣಗಳ ಮುಖಾಂತರ ವಿಶಾಲವಾಗಿದ್ದ ಹಳ್ಳವನ್ನು ಚಿಕ್ಕದಾಗಿ ಮಾಡಿರುತ್ತಾರೆ ಹಾಗೂ ಇತ್ತೀಚಿಗೆ ಹೂಳು ತುಂಬಿಕೊಂಡು ಪ್ರವಾಹವನ್ನುಂಟು ಮಾಡುವಲ್ಲಿ ಇವುಗಳ ಪಾತ್ರ ಮುಖ್ಯವಾಗಿದೆ. ಆದರೆ ಇದರಿಂದ ಜನರನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಸರಕಾರ ಭೂಮಿಯನ್ನು ಖರೀದಿ ಮಾಡಿ ಮನೆಗಳನ್ನು ಕಟ್ಟಿದೆ ಆದರೆ ಅವುಗಳು ವಾಸಯೋಗ್ಯವಾಗಿಲ್ಲ.

**ಅಧ್ಯಯನದ ಫಲಿತಗಳು**

- ಬೆಣ್ಣಿಹಳ್ಳದ ಒತ್ತುವರಿ ಮತ್ತು ಹೂಳನ್ನು ಎತ್ತದಿರುವುದು ಪ್ರವಾಹ ಆಗುವುದಕ್ಕೆ ನೇರ ಕಾರಣವಾಗಿದೆ ಹಾಗೂ ಪುನರ್ವಸತಿ ಜನರು ಹಳೆಯ ಗ್ರಾಮವನ್ನು ಬಿಡದೆ ಮೂಲ ಗ್ರಾಮದಲ್ಲಿಯೇ ವಾಸವಾಗಿದ್ದಾರೆ.
- ಬೆಣ್ಣಿಹಳ್ಳ ಪುನರ್ವಸತಿ ಜನರು ಸಾಮಾಜಿಕವಾಗಿ ಆರ್ಥಿಕವಾಗಿ ರಾಜಕೀಯವಾಗಿ ದಾರ್ಮಿಕವಾಗಿ ತುಂಬಾ ಶೋಚನೀಯ ಸ್ಥಿತಿಗೆ ಬಂದಿದ್ದಾರೆ. ಪುನರ್ವಸತಿ ಗ್ರಾಮದ ಜನರು ಭಾವನಾತ್ಮಕವಾಗಿ ಹಳೆಯ ಗ್ರಾಮದಂತೆ ಪುನರ್ವಸತಿ ಗ್ರಾಮದಲ್ಲಿ ಹೊಂದಿಕೊಳ್ಳಲು ಆಗುತ್ತಿಲ್ಲ.
- ಬೆಣ್ಣಿಹಳ್ಳ ಪುನರ್ವಸತಿ ಕೇಂದ್ರಗಳು ಸರಕಾರದ ಸೌಲಭ್ಯಗಳನ್ನು ಪಡೆದಿರುವುದು ಅಷ್ಟಕಷ್ಟೇ. ಇನ್ನೂ ಮನೆಗಳು ಹಂಚಿಕೆಯಾಗದೆ ಜನರು ಅತಂತ್ರ ಬದುಕನ್ನು ನಡೆಸುತ್ತಿದ್ದಾರೆ. ಪುನರ್ವಸತಿ ಗ್ರಾಮದಲ್ಲಿ ಕನಿಷ್ಠ ಮೂಲಭೂತ ಸೌಲಭ್ಯಗಳು ಇಲ್ಲದೆ ಹಳೆಯ ಗ್ರಾಮದ ಜನರು ಪುನರ್ವಸತಿ ಗ್ರಾಮಗಳಿಗೆ ಬರದಂತಾಗಿದೆ.
- ಬೆಣ್ಣಿಹಳ್ಳ ಪುನರ್ವಸತಿ ಕೇಂದ್ರಗಳ ಮನೆಗಳ ಹಂಚಿಕೆಯಲ್ಲಿ ದೂರುಪಯೋಗವಾಗಿರುವುದು ಕಂಡುಬಂದಿದೆ. ಕೆಲವೊಂದು ಹಂಚಿಕೆಯಾದರೂ

ಮನೆಗಳು ಬಿದ್ದು ಹೋಗಿವೆ. ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ಇದರಲ್ಲಿ ಸಂಪೂರ್ಣ ಭಾಗವಹಿಸಿ ಸಮಸ್ಯೆಗಳತ್ತ ಗಮನಹರಿಸುತ್ತಿವೆ.

**ಉಪಸಂಹಾರ**

ಪ್ರಸ್ತುತ ಸಂಶೋಧನೆಯು ಪುನರ್ವಸತಿ ಕೇಂದ್ರದ ಜಮೀನಿನ ಖರೀದಿಂಯಿಂದ ಹಿಡಿದು ಅಲ್ಲಿನ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸಂಪರ್ಕ, ಚರಂಡಿ, ಶಾಲಾ ಕಾಲೇಜು, ಆಸ್ಪತ್ರೆ, ಸ್ವಚ್ಛತೆ ಜಾನುವಾರುಗಳ ಕೊಟ್ಟಿಗೆ, ಪುನರ್ವಸತಿಯಾದ ಸ್ಥಳದಲ್ಲಿ ವಾಸಿಸುವರ ಸಂಖ್ಯೆ, ಜಾತಿ ಆಧಾರದ ಮೇಲೆ ಮನೆಗಳ ವಿಂಗಡಣೆ, ದಲಿತರ ಕೇರಿ, ಜಾತಿ, ಉದ್ಯೋಗ, ಮಹಿಳಾ ಮೀಸಲಾತಿ, ಸರ್ಕಾರಿ ಯೋಜನೆಗಳ ತಲುಪುವಿಕೆ ಇತ್ಯಾದಿ ಸಮಸ್ಯೆ ಮತ್ತು ಸವಾಲುಗಳನ್ನು ಒಳಗೊಂಡಿದೆ. ನೆರೆ ಹಾವಳಿಗೊಳಗಾದ ಗ್ರಾಮಗಳು ಜನರು ಮೂಲಸೌಲಭ್ಯಗಳ ಕೊರತೆಯಿಂದ ಪುನರ್ವಸತಿ ಗ್ರಾಮಗಳಿಗೆ ಬರಲು ಹಿಂಜರಿಯುತ್ತಾರೆ. ಹಾಗಾಗಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಈ ನಿಟ್ಟಿನಲ್ಲಿ ಗಮನಹರಿಸಿ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು ಜನರ ಜೀವನಮಟ್ಟ ಸುಧಾರಿಸುವಂತೆ ಮಾಡಬೇಕಿದೆ.

**ಪರಾಮರ್ಶನ ಗ್ರಂಥಗಳು**


- ಅಂಜಿನಪ್ಪ ಬಿ ಹೆಚ್. ಸಾಮಾಜಿಕ ಅಭಿವೃದ್ಧಿಯ ಆಯಾಮಗಳು. ಸೃಷ್ಟಿ ಪಬ್ಲಿಕೇಷನ್, ಬೆಂಗಳೂರು.
- ಚಂದ್ರಶೇಖರ್ ಟಿ ಆರ್. ಜಿಲ್ಲಾ ಅಭಿವೃದ್ಧಿ ಅಧ್ಯಯನ – ಗದಗ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಸೋಸಲೆ ಚಿನ್ನಸ್ವಾಮಿ ಎನ್. (2006). ಕೃಷ್ಣಾನದಿ ಪ್ರವಾಹದಲ್ಲಿ ಮುಳುಗಡೆಯಾದ ಗ್ರಾಮಗಳ ಸಮಾಜೋ ಆರ್ಥಿಕ ಅಧ್ಯಯನ. ಪಿಎಚ್‌ಡಿ ಮಹಾಪ್ರಬಂಧ, ಕನ್ನಡ ವಿವಿ, ಹಂಪಿ.
- ಸೋಸಲೆ ಚಿನ್ನಸ್ವಾಮಿ ಎನ್. (1999). ನಮ್ಮ ಗ್ರಾಮಗಳು ಅಂದು – ಇಂದು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಶೆಲ್ಲಿಕೇರಿ ಹೆಚ್ ವಿ. (2003). ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯಕ್ರಮಗಳು. ಮಹಾಂತೇಶ ಬುಕ್ ಡಿಪೋ, ಬಾಗಲಕೋಟ.
- ವೆಂಕಟೇಶ್ ಸಿ ಡಿ. (2011). ಆಶ್ರಯ ಯೋಜನೆ. ಅನ್ನಪೂರ್ಣ ಪ್ರಕಾಶನ, ಬೆಂಗಳೂರು.